**ಕನಸಿನ ಕಾಮನಬಿಲ್ಲು ಕಟ್ಟುವ ಕಾಲೇಜು ಹುಡುಗಿಯರು ಹೊಸ ಫ್ಯಾಷನಬಲ್ ಉಡುಗೆಯತ್ತ ಚಿತ್ತಹರಿಸಿದ್ದಾರೆ. ಉಡುಗೆ ಇರಲಿ ಚೊಕ್ಕ, ನೋಟ ಇರಲಿ ಪಕ್ಕಾ ಎನ್ನುವಂತೆ ಇಂದು ಹಳೆಯ ಶೈಲಿಯ ವಿಂಟೇಜ್ ಮಾದರಿಗಳು ಮತ್ತೆ ಮಾರುಕಟ್ಟೆಯಲ್ಲಿ ಹೊಸ ಅಲೆ ಎಬ್ಬಿಸಿವೆ. ಕನಸುಗಳ ಕ್ಯಾಂಪಸ್‌ನಲ್ಲಿ ಸ್ಟೈಲ್ ಜೊತೆ ಕಂಫರ್ಟ್ ಮುಖ್ಯ ಎಂಬ ಸತ್ಯ ಅರಿತು ಮುನ್ನಡೆಯುತ್ತಿದ್ದಾರೆ.**



## ಸದಾಕಾಲದ ಸುಂದರಿ

ಕಾಲೇಜು ಫ್ಯಾಷನ್ ಅಂದ ಕೂಡಲೇ ಮೊದಲು ನೆನಪಾಗುವುದೇ ಜೀನ್ಸ್. ಇದು ಚಿರಕಾಲದ ಟ್ರೆಂಡ್. ಸರಳವಾದ ಬ್ಲೂ ಜೀನ್ಸ್‌ಗೆ ಬಿಳಿ ಅಥವಾ ಯಾವುದೇ ತಿಳಿ ಬಣ್ಣದ ಟೀ ಶರ್ಟ್‌ಗಳನ್ನು ಧರಿಸಿ, ಅದರ ಮೇಲೊಂದು ಡೆನಿಮ್ ಜಾಕೆಟ್ ಧರಿಸಿದರೆ ಸಿಗುವ ರಗಡ್ ಲುಕ್ ಅದ್ಭುತ. ಇದು ದೈನಂದಿನ ತರಗತಿಗಳಿಗೆ ಮತ್ತು ಗೆಳೆಯರೊಂದಿಗೆ ಸುತ್ತಾಡಲು ಹೇಳಿ ಮಾಡಿಸಿದ ಔಟ್‌ಫಿಟ್.

ಕಾಣಿಸಿಕೊಳ್ಳುವುದು ಒಂದು ಸವಾಲೇ ಸರಿ. ಫ್ರೆಷರ್ಸ್ ಪಾರ್ಟಿಯಿಂದ ಹಿಡಿದು ವಾರ್ಷಿಕೋತ್ಸವದವರೆಗೆ, ನಿತ್ಯದ ತರಗತಿಯಿಂದ ಹಿಡಿದು ಕ್ಯಾಂಟೀನ್ ಹರಟೆಯವರೆಗೆ ಪ್ರತಿಯೊಂದಕ್ಕೂ ಸೂಕ್ತವಾದ ಉಡುಗೆ ಬೇಕು. ಅದಕ್ಕಾಗಿಯೇ ಫ್ಯಾಷನ್ ಲೋಕವು ಕಾಲೇಜು ಕುವರಿಯರಿಗಾಗಿ ದಿನನಿತ್ಯವೂ ಹೊಸ ವಿನ್ಯಾಸಗಳನ್ನು ಪರಿಚಯಿಸುತ್ತಿದೆ.

### ಬೆರಳ ತುದಿಯಲ್ಲಿ ಫ್ಯಾಷನ್ ಪಾಠ

ಹಿಂದಿನ ಕಾಲದಂತೆ 'ಯಾವ ಬಟ್ಟೆಗೆ ಯಾವುದು ಮ್ಯಾಚ್ ಆಗುತ್ತದೆ?' ಎಂದು ಯಾರನ್ನೂ ಕೇಳುವ ಅವಶ್ಯಕತೆ ಈಗಿಲ್ಲ. ಏಕೆಂದರೆ ಮೊಬೈಲ್ ಒಂದು ಕೈಯಲ್ಲಿದ್ದರೆ ಇಡೀ ಜಗತ್ತೇ ಬೆರಳ ತುದಿಯಲ್ಲಿದ್ದಂತೆ. ಹಾಗಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಫ್ಯಾಷನ್ ಗುರುಗಳ ಅಬ್ಬರ ಇಂದು ಜೋರಾಗಿದೆ. 'ಸೆಮಿನಾರ್‌ಗೆ ಈ ಲುಕ್ ಬೆಸ್ಟ್', 'ಕ್ಯಾಂಪಸ್‌ನಲ್ಲಿ ನಿಮ್ಮ ವ್ಯಕ್ತಿತ್ವ ಎದ್ದು ಕಾಣಲು ಹೀಗೆ ಈ ಔಟ್‌ಫಿಟ್ ಬೆಸ್ಟ್' ಎಂಬ ಸಲಹೆಗಳು ನಿಮಿಷಕ್ಕೊಂದು ಲಭ್ಯವಿವೆ. ಆದರೆ, ಈ ಡಿಜಿಟಲ್ ಅಬ್ಬರದ ನಡುವೆ ನಮಗೆ ಯಾವುದು ಒಪ್ಪುತ್ತದೆ ಎಂಬ ಜಾಣ್ಮೆ ನಮಗಿರಬೇಕು. ಬ್ರ್ಯಾಂಡೆಡ್ ಬಟ್ಟೆಗಳು ಮಾತ್ರ ಬೆಸ್ಟ್ ಲುಕ್ ನೀಡುತ್ತವೆ ಎಂಬುದು ತಪ್ಪುಕಲ್ಪನೆ. ನಾವು ಆಯ್ಕೆ ಮಾಡುವ ಶೈಲಿ ಮತ್ತು ಅದನ್ನು ಧರಿಸುವ ರೀತಿ ನಮ್ಮನ್ನು ಎಲ್ಲರ ನಡುವೆ ವಿಭಿನ್ನವಾಗಿ ಕಾಣುವಂತೆ ಮಾಡುತ್ತದೆ.

### ಇಂಡೊ-ವೆಸ್ಟರ್ನ್ ಸಂಚಲನ

ಉಡುಗೆ ಇರಲಿ ಚೊಕ್ಕ, ನೋಟ ಇರಲಿ ಪಕ್ಕಾ ಎನ್ನುವಂತೆ ಇಂದು ಹಳೆಯ ಶೈಲಿಯ ವಿಂಟೇಜ್ ಮಾದರಿಗಳು ಮತ್ತೆ ಮಾರುಕಟ್ಟೆಯಲ್ಲಿ ಹೊಸ ಅಲೆ ಎಬ್ಬಿಸಿವೆ. ಸಾಂಪ್ರದಾಯಿಕ ಕುರ್ತಾಗಳನ್ನು ಪಲಾಜೊ ಅಥವಾ ಲೂಸ್ ಜೀನ್ಸ್‌ನೊಂದಿಗೆ ಧರಿಸುವ 'ಇಂಡೊ–ವೆಸ್ಟರ್ನ್' ಶೈಲಿ ಈಗ ಕ್ಯಾಂಪಸ್‌ನಲ್ಲಿ ಸಖತ್ ಫೇಮಸ್. ಇದಕ್ಕೆ ದೊಡ್ಡದಾದ ಜುಮುಕಿ, ಕ್ಲಾಸಿಕ್ ಇಯರಿಂಗ್ಸ್ ಸೇರಿದರೆ ಕ್ಲಾಸ್‌ರೂಂನಲ್ಲಿ ಎಲ್ಲರ ಕಣ್ಣು ನಿಮ್ಮತ್ತಲೇ ಇರುವುದಂತೂ ಖಂಡಿತ.

ಸದಾ ಟ್ರೆಂಡ್ ಹಿಂದೆ ಓಡುವ ಕಾಲೇಜು ಕುವರಿಯರಿಗೆ ಓವರ್ ಸೈಜ್ಡ್ ಬಟ್ಟೆಗಳು ಬೆಸ್ಟ್. ಮೈಗಂಟುವ ಬಟ್ಟೆಗಳಿಗಿಂತ ಬ್ಯಾಗಿ ಪ್ಯಾಂಟ್, ಸಡಿಲವಾದ ದೊಡ್ಡ ಟೀ ಶರ್ಟ್ ಧರಿಸಿದರೆ ಸಖತ್ ಸ್ಟೈಲಿಶ್ ಆಗಿ ಕಾಣುವುದಂತೂ ಪಕ್ಕಾ. ಇದರೊಂದಿಗೆ ಸ್ನೀಕರ್ಸ್ ಮತ್ತು ಒಂದು ಅನಾಲಾಗ್ ವಾಚ್ ಧರಿಸಿದರೆ ನೀವು ಬಹಳ ಕೂಲ್‌ಆಗಿ ಕಾಣುತ್ತೀರಿ. ಜೊತೆಗೆ ದಿನವಿಡೀ ಲವಲವಿಕೆಯಿಂದ ಕ್ಯಾಂಪಸ್ ರೌಂಡ್ ಹಾಕಲು ಇದು ಹೇಳಿ ಮಾಡಿಸಿದ ಉಡುಗೆ.

### ಎಥ್ನಿಕ್ ವೇರ್

ಅತಿಯಾದ ಆಡಂಬರವಿಲ್ಲದ ಸರಳ ಕಾಟನ್ ಬಟ್ಟೆಗಳು ಸೌಮ್ಯ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿರುತ್ತವೆ. ಇನ್ನು ಸಾಂಪ್ರದಾಯಿಕತೆಯನ್ನು ಇಷ್ಟಪಡುವವರಿಗೆ ಉದ್ದನೆಯ ಕುರ್ತಾ, ಲೆಗ್ಗಿನ್ಸ್ ಅಥವಾ ಸಿಗರೇಟ್ ಕಟ್ ಪ್ಯಾಂಟ್ಸ್ ಮತ್ತು ಆಕ್ಸಿಡೈಸ್ಡ್ ಜ್ಯುವೆಲ್ಲರಿ ಅತ್ಯುತ್ತಮ ಆಯ್ಕೆ. ಇದು ಕೇವಲ ಸ್ಟೈಲ್ ಮಾತ್ರವಲ್ಲದೆ, ಒಂದು ರೀತಿಯ ಗಾಂಭೀರ್ಯವನ್ನೂ ನೀಡುತ್ತದೆ.

### ಲಾಂಗ್ ಸ್ಕರ್ಟ್ ಜೊತೆ ಸ್ಟೈಲ್ ಮಾಡಿ

ಕೊಂಚ ಡಿಫರೆಂಟ್ ಆಗಿ, ಕ್ಲಾಸಿಯಾಗಿ ಕಾಣಲು ಬಯಸುವವರು ವಾರದಲ್ಲಿ ಆಗೊಮ್ಮೆ ಈಗೊಮ್ಮೆ ಲಾಂಗ್ ಸ್ಕರ್ಟ್, ಹೈ ನೆಕ್ ಟಾಪ್‌ಗಳನ್ನು ಧರಿಸಿ, ಅದಕ್ಕೊಂದು ದುಪಟ್ಟಾ ಹಾಕಿ, ಕಾಲೇಜಿನಲ್ಲಿ ಹೆಜ್ಜೆ ಹಾಕಿದರೆ, ನೋಡುಗರ ಎದೆಯಲ್ಲಿ ಚಿಟ್ಟೆಗಳು ಹಾರೋದಂತೂ ಗ್ಯಾರಂಟಿ.

### ಸೆಮಿನಾರ್‌ಗಳಿದ್ದಾಗ ಎಚ್ಚರ!

ಸೆಮಿನಾರ್ ಅಥವಾ ವೆಬಿನಾರ್‌ಗಳಲ್ಲಿ ವೇದಿಕೆಯ ಮೇಲೆ ನಿಂತಾಗ ಸಾವಿರಾರು ಕಣ್ಣುಗಳು ನಮ್ಮನ್ನು ಗಮನಿಸುತ್ತಿರುತ್ತವೆ. ಅಂತಹ ಸಮಯದಲ್ಲಿ ಫಾರ್ಮಲ್ ಪ್ಯಾಂಟ್ಸ್–ಶರ್ಟ್ ಅಥವಾ ಸಿಂಪಲ್ ಕಾಟನ್ ಟಾಪ್ ಧರಿಸುವುದು ಸೂಕ್ತ. ಅತಿಯಾದ ಅಬ್ಬರವಿಲ್ಲದ ಸರಳವಾಗಿ ಮ್ಯಾಚ್ ಆಗುವ ಇಯರಿಂಗ್ಸ್ ಇದ್ದರೆ ಸಾಕು. ಹಾಗಾಗಿ ಇಂತಹ ಸಂದರ್ಭದಲ್ಲಿ ನಿಮ್ಮ ಔಟ್‌ಫಿಟ್ ಬಗ್ಗೆ ಕೊಂಚ ಎಚ್ಚರ ವಹಿಸಿದರೆ ಉತ್ತಮ. ನಿಮ್ಮ ಲುಕ್ ಪರಿಪೂರ್ಣವಾಗಲು ಆಕ್ಸೆಸರೀಸ್‌ಗಳ ಆಯ್ಕೆ ಮುಖ್ಯ. ಈಗ ಹೈ ಹೀಲ್ಸ್ ಕಾಲ ಮುಗಿದು ಬಿಳಿ ಸ್ನೀಕರ್ಸ್‌ಗಳ ಹವಾ ಶುರುವಾಗಿದೆ. ಬಿಸಿಲಿಗೆ ಸನ್‌ಗ್ಲಾಸ್, ಕೈಗೆ ಸ್ಮಾರ್ಟ್ ವಾಚ್ ಮತ್ತು ಒಂದು ಸ್ಟೈಲಿಷ್ ಬ್ಯಾಗ್ ಇದ್ದರೆ ನೀವು ಕಂಪ್ಲೀಟ್ ಸ್ಟೈಲ್ ಐಕಾನ್. ನಿಮ್ಮ ಹೇರ್‌ಸ್ಟೈಲ್ ಕೂಡ ನಿಮ್ಮ ಉಡುಗೆಗೆ ಪೂರಕವಾಗಿರಲಿ. ಸಾಂಪ್ರದಾಯಿಕತೆಗೆ ಜಡೆ ಅಥವಾ ಮುಡಿ ಚಂದವಾದರೆ, ಮಾಡರ್ನ್ ಉಡುಗೆಗೆ ಲೂಸ್ ಹೇರ್ ಅಥವಾ ಹೈ ಪೋನಿಟೇಲ್ ಹೇಳಿ ಮಾಡಿಸಿದಂತಿರುತ್ತದೆ. ■

